# ಕರ್ನಾಟಕ ರಾಷ್ಟ್ರ ಸಮಿತಿ

## KARNATAKA RASHTRA SAMITHI

ಸ್ವಚ್ಛ, ಪ್ರಾಮಾಣಿಕ, ಜನಪರ ರಾಜಕಾರಣಕ್ಕಾಗಿ

ಪತ್ರಿಕಾ ಟಿಪ್ಪಣಿ

(ಬೆಂಗಳೂರು, 29-02-2021)

ರಾಜ್ಯದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಎಸಿಬಿ ಆರಂಭವಾಗಿ ಐದು ವರ್ಷವಾಗಿದೆ. ಇಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತಮ್ಮ ಹಿತಕ್ಕಾಗಿ ಲೋಕಾಯುಕ್ತವನ್ನು ದುರ್ಬಲಗೊಳಿಸಿ, ಬಲಹೀನ ಎಸಿಬಿ ರಚಿಸಿದರು. ಅಧಿಕಾರಕ್ಕೆ ಬಂದರೆ ಬೇಸಿಗೆಯನ್ನು ಎಸಿಬಿ ಯನ್ನು ಮುಚ್ಚಿ ಲೋಕಾಯುಕ್ತಕ್ಕೆ ಅದರ ಹಿಂದಿನ ಅಧಿಕಾರ ವಾಪಸ್ ನೀಡುತ್ತೇವೆ ಎಂದು ಹೇಳಿದ್ದ ಬಿಜೆಪಿ ಸರ್ಕಾರ ಇಂದು ಅದರ ಬಗ್ಗೆ ಮಾತನಾಡುತ್ತಿಲ್ಲ. ಪ್ರಸ್ತುತ ಸರ್ಕಾರದ ವಿರುದ್ಧ ಅನೇಕ ಭ್ರಷ್ಟಾಚಾರದ ಆರೋಪಗಳಿದ್ದರೂ ಯಾವುದೂ ಕೂಡ ತನಿಖೆಯಾಗದೆ ಮುಚ್ಚಿ ಹಾಕಲಾಗುತ್ತಿದೆ. ಈ ನಿಟ್ಟಿನಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಕಾರ್ಯವೈಖರಿಯನ್ನು ಅವಲೋಕಿಸಬೇಕಾಗಿದೆ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಪಡೆದ ಮಾಹಿತಿ ಆಧಾರದ ಮೇಲೆ ಹೇಳುವುದಾದರೆ ಎಸಿಬಿ ಭ್ರಷ್ಟಾಚಾರವನ್ನು ನಿಗ್ರಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿ ಇಂದು ಸಾರ್ವಜನಿಕ ಪಕ್ಷಕ್ಕೆ ಬಿಳಿಯಾನೆ ಯಾಗಿದೆ. ನಾವು ಎಸಿಪಿಯಿಂದ ಪಡೆದ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕ್ರೂಢೀಕರಿಸಲಾಗಿದೆ;

| ಕ್ರಮ ಸಂಖ್ಯೆ | ವರ್ಷ | DA ಪ್ರಕರಣದಲ್ಲಿ ದಾಳಿ | ಲಂಚ ಪ್ರಕರಣದಲ್ಲಿ ದಾಳಿ | ಬೆಂಗಳೂರು ಎಸಿಬಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | ಬೆಂಗಳೂರು ಠಾಣೆಗೆ ಖರ್ಚಾಗಿರುವ ಹಣ (ರೂಗಳಲ್ಲಿ) | ಎ ಸಿ ಬಿ ರಾಜ್ಯದಲ್ಲಿ ಮಾಡಿರುವ ವೆಚ್ಚ (ರೂಗಳಲ್ಲಿ) | ರಾಜ್ಯದಲ್ಲಿ ಎಸಿಬಿ ಆರಂಭದಿಂದ ಇಲ್ಲಿಯವರೆಗೆ ದಾಖಲಿಸಿರುವ ಪ್ರಕರಣಗಳು | ಇಲ್ಲಿಯವರೆಗೆ ಶಿಕ್ಷೆಯಾಗಿರುವ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|---|
| 1 | 2016-17 | 31 | 99 | 33 | 19,09,31,133 | 17,44,88,115 | 1,445 | 04 |
| 2 | 2017-18 | 46 | 189 | 52 | 14,82,30,084 | 32,49,61,662 | | |
| 3 | 2018-19 | 72 | 231 | 38 | 11,72,72,643 | 35,35,20,215 | | |
| 4 | 2019-20 | 19 | 245 | 48 | 15,00,01,199 | 34,50,79,463 | | |
| 5 | 2020-21 | 18 | 184 | 42 | - | - | | |
| | ಒಟ್ಟು | 186 | 957 | 213 | 60,57,35,059 | 119,97,49,495 | | |
| | | | 1143 | | | | 1,445 | 04 |

ಈ ಮೇಲಿನ ಅಂಶಗಳ ಪ್ರಕಾರ ಹೇಳುವುದಾದರೆ ಎಸಿಬಿ ರಾಜ್ಯದಲ್ಲಿ ಅದು ಯಾವು ದೇಶಕ್ಕೆ ಸ್ಥಾಪನೆಯಾಗಿದೆಯೋ, ಅದನ್ನು ನಿರ್ವಹಿಸುವಲ್ಲಿ ಸೋತಿದ್ದು ಕೇವಲ ತೋರಿಕೆಗೆ ಮಾತ್ರ ಇದ್ದಂತಿದೆ. ಸರ್ಕಾರವು ಭ್ರಷ್ಟಾಚಾರ ನಿಗ್ರಹದ ಕೆಲಸದಲ್ಲಿ ತೊಡಗಿದೆ ಎಂದು ಆಗಿಂದ್ದಾಗೆ ಜನರನ್ನು ನಂಬಿಸುವ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಎಸಿಬಿಗೆ

ಬರುವ ಬಹುತೇಕ ದೂರುಗಳನ್ನು ಯಾವುದೇ ತನಿಖೆ ಮಾಡದೆ ಪುರಾವೆಗಳಿಲ್ಲ, ಸಲ್ಲಿಸಿರುವ ದಾಖಲೆಗಳು ನಿಖರವಾಗಿಲ್ಲ ಅಥವಾ ನಾಮಕಾವಸ್ಥೆಗಾಗಿ ಕೆಲವು ಆರೋಪಿತರು ದೂರದಲ್ಲಿರುವ ಅಂಶಗಳನ್ನು ನಿರಾಕರಿಸಿದ್ದಾರೆಂದು ಹೇಳಿಕೆ ಪಡೆದು ಮುಕ್ತಾಯ ಮಾಡಲಾಗುತ್ತಿದೆ. ಹೀಗೆ ಕಾರ್ಯನಿರ್ವಹಿಸಲು ನೂರಾರು ಕೋಟಿ ಖರ್ಚು ಮಾಡಲು ಎಸಿಬಿ ಬೇಕಾಗಿಯೇ ಇಲ್ಲ. ಪ್ರಥಮಿಕ ತನಿಖೆಯನ್ನು ಮಾಡದೆ, ಎಲ್ಲವನ್ನು ದೂರುದಾರರೇ ನೀಡಬೇಕೆಂದರೆ, ಎಸಿಬಿ ಏನು ಮಾಡುತ್ತದೆ ಎಂಬ ಪ್ರಶ್ನೆಯನ್ನು ಜನರು ಕೇಳಲಾರಂಭಿಸಿದ್ದಾರೆ. ರಾಜ್ಯದಲ್ಲಿ ಇದುವರೆಗೂ 1,445 ಪ್ರಕರಣಗಳು ದಾಖಲಾಗಿ ಕೇವಲ ನಾಲ್ಕು ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿರುವುದು ಎಸಿಬಿ ಎಷ್ಟರಮಟ್ಟಿಗೆ ವೃತ್ತಿಪರತೆಯನ್ನು ಮರೆಯುತ್ತಿದೆ ಎಂದು ತೋರಿಸುತ್ತದೆ. ನಾಲ್ಕು ಜನರನ್ನ ಶಿಕ್ಷಿಸಲು ಕಳೆದ ಐದು ವರ್ಷದಲ್ಲಿ ಸುಮಾರು 120 ಕೋಟಿ ಹಣವನ್ನು ಎಸಿಬಿಗಾಗಿ ಖರ್ಚು ಮಾಡಲಾಗಿದೆ.

ಎಸಿಬಿಯ ಈ ಕಾರ್ಯವೈಖರಿಯಿಂದ, ಸರ್ಕಾರಿ ನೌಕರರು ಯಾವುದೇ ಭಯವಿಲ್ಲದೆ ನಿರ್ಭಿಡೆಯಿಂದ ಭ್ರಷ್ಟಾಚಾರ ನಡೆಸಲು ಅವಕಾಶ ಮಾಡಿಕೊಟ್ಟಂತಾಗಿದೆ. ಸಾರ್ವಜನಿಕರು ನೀಡುವ ಬಹುತೇಕ ದೂರುಗಳು ಕಸದಬುಟ್ಟಿಗೆ ಸೇರುತ್ತಿದ್ದು ಎಸಿಬಿ ಮೇಲೆ ಸಂಪೂರ್ಣ ವಿಶ್ವಾಸ ಕಳೆದುಕೊಂಡಿದ್ದಾರೆ. ಕಣ್ಣಿಗೆ ರಾಚುವ ಹಾಗೆ ಪ್ರಚಾರ ನಡೆಯುತ್ತಿದ್ದರು ಎಸಿಬಿ ಕಾರ್ಯವೈಖರಿ ಮಾತ್ರ ಬದಲಾಗುತ್ತಿಲ್ಲ. ಎಸಿಬಿ ಯಲ್ಲಿನ ಅಧಿಕಾರಿಗಳನ್ನು ಪದೇಪದೇ ಸರ್ಕಾರವು ಮನಸೋಇಚ್ಛೆ ವರ್ಗಾವಣೆ ಮಾಡುತ್ತಿದ್ದು ಅದು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡುತ್ತಿಲ್ಲ. ಪ್ರಭಾವಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಮೇಲೆ ದೂರು ನೀಡಿದರೆ, ತನಿಖೆಗೆ ಮತ್ತು ದೂರು ದಾಖಲಿಸಲು ಸರ್ಕಾರದ ಅನುಮತಿ ಬೇಕು ಎಂದು ಕಾಯ್ದು ಕುಳಿತುಕೊಳ್ಳುವ ಪರಿಸ್ಥಿತಿ ಎಸಿಬಿಗೆ ಇದ್ದು, ಇಷ್ಟೊಂದು ಅಪಾರ ಪ್ರಮಾಣದ ಹಣ ಖರ್ಚು ಮಾಡಿ ಏನನ್ನು ಸಾಧಿಸದಿದ್ದರೆ ಈ ಸಂಸ್ಥೆ ಇದ್ದು ಇಲ್ಲದಂತಾಗಿದೆ ಎಂದು ತೋರಿಸುತ್ತದೆ. ಕಣದಿಂದಲೇ ಈ ಕಾರಣದಿಂದಲೇ ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು ಜನರು ತಮ್ಮ ಕೆಲಸಗಳಿಗೆ ಪರದಾಡುವಂತಾಗಿದೆ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಎಸಿಬಿ ಆರಂಭದಿಂದಲೂ ಅದನ್ನು ಮುಚ್ಚಿ ಲೋಕಾಯುಕ್ತಕ್ಕೆ ಅದರ ಹಿಂದಿನ ಅಧಿಕಾರ ಮತ್ತು ಜೊತೆಗೆ ಮತ್ತಷ್ಟು ಅಧಿಕಾರ ಇರಬೇಕು ಎಂದು ಒತ್ತಾಯಿಸುತ್ತಿದೆ.

ವಂದನೆಗಳು

ಮಲ್ಲಿಕಾರ್ಜುನ್ ಭಟ್ಟರಹಳ್ಳಿ
ರಾಜ್ಯ ಕಾರ್ಯದರ್ಶಿ
9066133377